# ಹೊಸ ಮಾರ್ಗಸೂಚಿಯ ಪ್ರಕಾರ
# ಭಾಗ್ಯಲಕ್ಷ್ಮೀ ಸುಕನ್ಯಾ ಸಮೃದ್ಧಿ ಖಾತೆಗೆ ಸಂಬಂಧಿಸಿದಂತೆ
# ಅನುಸರಿಸಬೇಕಾದ ಕ್ರಮಗಳು

## ಸನ್ನಿವೇಶ – 1

- ಭಾಗ್ಯಲಕ್ಷ್ಮಿ ಖಾತೆಯನ್ನು ಹೊರತುಪಡಿಸಿ ಫಲಾನುಭವಿಯ ಹೆಸರಿನಲ್ಲಿ ಬೇರೆ ಎಲ್ಲಿಯೂ (ಅಂಚೆ ಕಛೇರಿ ಹಾಗೂ ಬ್ಯಾಂಕ್‌ಗಳಲ್ಲಿ) SSA ಖಾತೆ ಇರುವುದಿಲ್ಲ
- ಈ ಸಂದರ್ಭದಲ್ಲಿ ಭಾಗ್ಯಲಕ್ಷ್ಮಿ ಖಾತೆಯ AOF (Account Opening Form) ನ್ನು ಸೂಕ್ತ ದಾಖಲೆಗಳನ್ನು ಪಡೆದು ಪೂರ್ಣ ಮಾಹಿತಿಯೊಂದಿಗೆ ಭರ್ತಿ ಮಾಡುವುದು
- ಭಾಗ್ಯಲಕ್ಷ್ಮಿ ಖಾತೆಯ ಪಾಸ್‌ಪುಸ್ತಕವನ್ನು ಸ್ವೀಕೃತಿ ಪಡೆದು ಪೋಷಕರಿಗೆ ನೀಡುವುದು
- ಭರ್ತಿ ಮಾಡಿದ AOF (Account Opening Form) ಗಳನ್ನು Bundle ಮಾಡಿ Bengaluru GPO ಗೆ ಕಳುಹಿಸಿಕೊಡುವುದು.

## ಸನ್ನಿವೇಶ–2

ಫಲಾನುಭವಿಯ ಹೆಸರಿನಲ್ಲಿ ಎರಡು ಖಾತೆಗಳು ತೆರೆಯಲ್ಪಟ್ಟಿರುತ್ತವೆ.

- ವೈಯಕ್ತಿಕ–SSA ಖಾತೆಯು ಮೊದಲು ತೆರೆದಿರುತ್ತದೆ.
- ಭಾಗ್ಯಲಕ್ಷ್ಮಿ–SSA ಖಾತೆಯು ನಂತರದ ದಿನಾಂಕದಲ್ಲಿ ಎರಡನೆಯದಾಗಿ ತೆರೆದಿರುತ್ತದೆ.

ಹೊಸ ಮಾರ್ಗಸೂಚಿಯ ಪ್ರಕಾರ ಮೊದಲೇ ತೆರೆದಿರುವಂತಹ ವೈಯಕ್ತಿಕ–SSA ಖಾತೆಯನ್ನು G.P.O Bengaluru ಗೆ **ವರ್ಗಾವಣೆ ಮಾಡುವ ಹಾಗೂ 118/– ರೂ ಗಳನ್ನು ಪಾವತಿಸುವ ಅವಶ್ಯಕತೆ ಇರುವುದಿಲ್ಲ.**

**ಸನ್ನಿವೇಶ–2 ರ ಪ್ರಕಾರ G.P.O Bengaluru ಗೆ ಕಳುಹಿಸಿಕೊಡಬೇಕಾದ ದಾಖಲೆಗಳು**

1. ಭಾಗ್ಯಲಕ್ಷ್ಮಿ ಖಾತೆಯ ಪಾಸ್‌ಪುಸ್ತಕ (Original)
2. ಭರ್ತಿ ಮಾಡಿದ ಭಾಗ್ಯಲಕ್ಷ್ಮಿ SSA ಖಾತೆಯ AOF (Account Opening Form) ಹಾಗೂ ಸೂಕ್ತ ದಾಖಲೆಗಳು
3. ವೈಯಕ್ತಿಕ SSA ಖಾತೆಯ ಪಾಸ್‌ಪುಸ್ತಕದ ನಕಲು ಪ್ರತಿ(Xerox)
4. ಮೊದಲೇ ತೆರೆದಿರುವಂತಹ ವೈಯಕ್ತಿಕ SSA ಖಾತೆಯನ್ನು ಭಾಗ್ಯಲಕ್ಷ್ಮಿ ಯೋಜನೆಗೆ ಸೇರಿಸುವಂತೆ ಕೋರಿ **ಪೋಷಕರಿಂದ** ಧೃಢೀಕರಣ ಪತ್ರ
5. ಭಾಗ್ಯಲಕ್ಷ್ಮಿ SSA ಖಾತೆಯ ಮುಕ್ತಾಯಕ್ಕಾಗಿ Guardian ಸಹಿ ಇರುವ ಅರ್ಜಿ (SB-7a)

## **ಸನ್ನಿವೇಶ – 3**

ಫಲಾನುಭವಿಯ ಹೆಸರಿನಲ್ಲಿ ಎರಡು SSA ಖಾತೆಗಳು ತೆರೆಯಲ್ಪಟ್ಟಿರುತ್ತವೆ.

- ಭಾಗ್ಯಲಕ್ಷ್ಮಿ–SSA ಖಾತೆಯು ಮೊದಲು ತೆರೆದಿರುತ್ತದೆ.
- ವೈಯಕ್ತಿಕ–SSA ಖಾತೆಯು ನಂತರದ ದಿನಾಂಕದಲ್ಲಿ ಎರಡನೆಯದಾಗಿ ತೆರೆದಿರುತ್ತದೆ.

ಈ ಸಂದರ್ಭದಲ್ಲಿ ಎರಡನೆಯದಾಗಿ ತೆರೆಯಲ್ಪಟ್ಟ ವೈಯಕ್ತಿಕ–SSA ಖಾತೆಯನ್ನು ಸಂಬಂಧಪಟ್ಟ ಅಂಚೆ ಕಛೇರಿ ಅಥವಾ ಬ್ಯಾಂಕ್‌ಗಳಲ್ಲಿ ಮುಕ್ತಾಯಗೊಳಿಸಿಕೊಳ್ಳುವಂತೆ (Account Close) ಪೋಷಕರಿಗೆ ಸೂಚಿಸುವುದು. ವೈಯಕ್ತಿಕ ಖಾತೆಯು ಮುಕ್ತಾಯಗೊಂಡಿರುವುದನ್ನು ಖಾತ್ರಿ ಪಡಿಸಿಕೊಂಡು ಆನಂತರ ಭಾಗ್ಯಲಕ್ಷ್ಮಿ SSA ಖಾತೆಯ ಪಾಸ್‌ಪುಸ್ತಕವನ್ನು (Original) ಸ್ವೀಕೃತಿ ಪಡೆದುಕೊಂಡು ಪೋಷಕರಿಗೆ ನೀಡುವುದು.

**<u>ಸನ್ನಿವೇಶ–3 ರ ಪ್ರಕಾರ G.P.O Bengaluru ಗೆ ಕಳುಹಿಸಿಕೊಡಬೇಕಾದ ದಾಖಲೆಗಳು</u>**

1. ಭರ್ತಿ ಮಾಡಿದ ಭಾಗ್ಯಲಕ್ಷ್ಮಿ SSA ಖಾತೆಯ AOF (Account Opening Form) ಹಾಗೂ ಸೂಕ್ತ ದಾಖಲೆಗಳು

# ಬ್ಯಾಂಕ್‌ಗಳಲ್ಲಿ ವೈಯಕ್ತಿಕ ಖಾತೆಯು ತೆರೆದಿದ್ದರೆ ಅನುಸರಿಸುವ ಕ್ರಮಗಳು

## ಸನ್ನಿವೇಶ – 2

ಯಾವುದೇ ಬ್ಯಾಂಕ್‌ಗಳಲ್ಲಿ SSA ಖಾತೆಯನ್ನು ತೆರೆದಿದ್ದು ಅದು ಸನ್ನಿವೇಶ–2 ರ ಅಡಿಯಲ್ಲಿ ಇದ್ದರೆ ಅಂದರೆ :–

- ವೈಯಕ್ತಿಕ –SSA ಖಾತೆಯು ಮೊದಲು ಬ್ಯಾಂಕಿನಲ್ಲಿ ತೆರೆದಿರುತ್ತದೆ.
- ಭಾಗ್ಯಲಕ್ಷ್ಮಿ–SSA ಖಾತೆಯು ನಂತರದ ದಿನಾಂಕದಲ್ಲಿ ಎರಡನೆಯದಾಗಿ ತೆರೆದಿರುತ್ತದೆ.

ಆ ವೈಯಕ್ತಿಕ–SSA ಖಾತೆಗಳನ್ನು ಸಂಬಂಧಪಟ್ಟ ಬ್ಯಾಂಕ್‌ಗಳಿಂದ G.P.O Bengaluru ಗೆ ಖಾತೆ–ವರ್ಗಾವಣೆ ಮಾಡಿಸುವುದು.

**ಈ ಸಂದರ್ಭದಲ್ಲಿ ಕೆಳಕಂಡ ದಾಖಲೆಗಳನ್ನು G.P.O Bengaluru ಗೆ ಕಳುಹಿಸಿಕೊಡುವುದು**

1. ಭಾಗ್ಯಲಕ್ಷ್ಮಿ–SSA ಖಾತೆಯ ಪಾಸ್‌ಪುಸ್ತಕ (Original)
2. ಭರ್ತಿ ಮಾಡಿದ ಭಾಗ್ಯಲಕ್ಷ್ಮಿ–SSA ಖಾತೆಯ AOF (Account Opening Form) ಹಾಗೂ ಸೂಕ್ತ ದಾಖಲೆಗಳು
3. ಬ್ಯಾಂಕ್ ಖಾತೆಗೆ ಸಂಬಂಧಿಸಿದ DD/Cheque (**Chief Post Master, Bengaluru GPO** ಹೆಸರಿನಲ್ಲಿರಬೇಕು)
4. Bank Account Statement (ಖಾತೆ ತೆರೆದ ದಿನಾಂಕದಿಂದ, ಖಾತೆ ಮುಕ್ತಾಯವಾದ ದಿನಾಂಕದವರೆಗೆ ಇರಬೇಕು)
5. ಬ್ಯಾಂಕ್ ಖಾತೆ ವರ್ಗಾವಣೆ ಮಾಡುತ್ತಿರುವ ಕುರಿತು ಬ್ಯಾಂಕ್ ಮ್ಯಾನೇಜರ್ ಅವರಿಂದ ಪತ್ರ.
6. ಭಾಗ್ಯಲಕ್ಷ್ಮಿ–SSA ಖಾತೆಯ ಮುಕ್ತಾಯಕ್ಕಾಗಿ Guardian ಸಹಿ ಇರುವ ಅರ್ಜಿ (SB-7a)
7. Revised AOF & KYC (ಬ್ಯಾಂಕ್ ಖಾತೆಯಲ್ಲಿ ಯಾರು Guardian ಆಗಿರುತ್ತಾರೋ ಅವರ ವಿವರಗಳೊಂದಿಗೆ)

## ಸನ್ನಿವೇಶ – 3

ಯಾವುದೇ ಬ್ಯಾಂಕ್‌ಗಳಲ್ಲಿ SSA ಖಾತೆಯನ್ನು ತೆರೆದಿದ್ದು ಅದು ಸನ್ನಿವೇಶ–3 ರ ಅಡಿಯಲ್ಲಿ ಇದ್ದರೆ ಅಂದರೆ

- ಭಾಗ್ಯಲಕ್ಷ್ಮಿ–SSA ಖಾತೆಯು ಮೊದಲು ತೆರೆದಿರುತ್ತದೆ.
- ವೈಯಕ್ತಿಕ–SSA ಖಾತೆಯು ನಂತರದ ದಿನಾಂಕದಲ್ಲಿ ಎರಡನೆಯದಾಗಿ ಬ್ಯಾಂಕಿನಲ್ಲಿ ತೆರೆದಿರುತ್ತದೆ.

ಆ ವೈಯಕ್ತಿಕ–SSA ಖಾತೆಗಳನ್ನು ಸಂಬಂಧಪಟ್ಟ ಬ್ಯಾಂಕ್‌ಗಳಲ್ಲಿ ಮುಕ್ತಾಯಗೊಳಿಸಿಕೊಳ್ಳುವಂತೆ (Account Close) ಪೋಷಕರಿಗೆ ಸೂಚಿಸುವುದು, ವೈಯಕ್ತಿಕ ಖಾತೆಯು ಮುಕ್ತಾಯಗೊಂಡಿರುವುದನ್ನು ಖಾತ್ರಿ ಪಡಿಸಿಕೊಂಡು ಆನಂತರ ಭಾಗ್ಯಲಕ್ಷ್ಮಿ-SSA ಖಾತೆಯ ಪಾಸ್‌ಪುಸ್ತಕವನ್ನು(Original) ಸ್ವೀಕೃತಿ ಪಡೆದುಕೊಂಡು ಪೋಷಕರಿಗೆ ನೀಡುವುದು.

### ಸನ್ನಿವೇಶ–3 ರ ಪ್ರಕಾರ G.P.O Bengaluru ಗೆ ಕಳುಹಿಸಿಕೊಡಬೇಕಾದ ದಾಖಲೆಗಳು

1. ಭರ್ತಿ ಮಾಡಿದ ಭಾಗ್ಯಲಕ್ಷ್ಮಿ–SSA ಖಾತೆಯ AOF (Account Opening Form) ಹಾಗೂ ಸೂಕ್ತ ದಾಖಲೆಗಳು

## Guardian death ಸಂದರ್ಭದಲ್ಲಿ ಅನುಸರಿಸಬೇಕಾದ ಕ್ರಮಗಳು

### ಈ ಸಂದರ್ಭದಲ್ಲಿ ಕೆಳಕಂಡ ದಾಖಲೆಗಳನ್ನು G.P.O Bengaluru ಗೆ ಕಳುಹಿಸಿಕೊಡುವುದು

1. ಯಾರ ಹೆಸರಿನಲ್ಲಿ Guardianship ಪಡೆಯಲು ಬಯಸುತ್ತಾರೋ ಅವರಿಂದ ತೆಗೆದುಕೊಂಡ Guardian ಬದಲಾವಣೆ ಕೋರಿ ಅರ್ಜಿ.
2. ಸಂಬಂಧಪಟ್ಟ CDPO ಇಂದ ಪತ್ರ.
3. ಹೊಸ Guardian ಹಾಗೂ ಫಲಾನುಭವಿಯ ವಿವರಗಳನ್ನೊಳಗೊಂಡ Revised KYC ಮತ್ತು Account Opening Form ಹಾಗೂ ಸೂಕ್ತ ದಾಖಲೆಗಳು.

## ಫಲಾನುಭವಿ ಮರಣ ಹೊಂದಿದ ಸಂದರ್ಭದಲ್ಲಿ ಅನುಸರಿಸಬೇಕಾದ ಕ್ರಮಗಳು

### ಈ ಸಂದರ್ಭದಲ್ಲಿ ಲಗತ್ತಿಸಬೇಕಾದ ದಾಖಲೆಗಳು

1. ಫಲಾನುಭವಿಯ ಮರಣ ಧೃಢೀಕರಣ ಪತ್ರದ Xerox ಪ್ರತಿ.
2. Guardian ಅವರಿಂದ Death claim (ಖಾತೆ ಮುಕ್ತಾಯ) ಕೋರಿ ಅರ್ಜಿ
3. ಸಂಬಂಧಪಟ್ಟ CDPO ಅವರಿಂದ ಪತ್ರ
4. ಭಾಗ್ಯಲಕ್ಷ್ಮಿ ಖಾತೆಯ ಪಾಸ್‌ಪುಸ್ತಕ (Original)
5. ಭಾಗ್ಯಲಕ್ಷ್ಮಿ–SSA ಖಾತೆಯ ಮುಕ್ತಾಯಕ್ಕಾಗಿ Guardian ಸಹಿ ಇರುವ ಅರ್ಜಿ (SB-7a)
6. Guardian ಅವರು ಅಂಚೆಕಛೇರಿ ಅಥವಾ ಬ್ಯಾಂಕ್‌ಗಳಲ್ಲಿ ತೆರೆದಿರುವ ಉಳಿತಾಯ ಖಾತೆಯ ವಿವರ (ಆ ಖಾತೆಯ ಪಾಸ್‌ಪುಸ್ತಕದ ಮುಖಪುಟದ Xerox)

ಮೇಲ್ಕಂಡ ಎಲ್ಲಾ ದಾಖಲೆಗಳನ್ನು **ಜಂಟಿ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು,** ಇವರ ಮುಖಾಂತರ G.P.O Bengaluru ಗೆ ಕಳುಹಿಸಿಕೊಡುವುದು.

## ಅನಿಯಮಿತ ಖಾತೆಗಳು ಇದ್ದ ಸಂದರ್ಭದಲ್ಲಿ ಅನುಸರಿಸುವ ಕ್ರಮಗಳು

1. ಒಂದೇ ಫಲಾನುಭವಿಯ ಹೆಸರಿನಲ್ಲಿ ಒಂದಕ್ಕಿಂತ ಹೆಚ್ಚು ಭಾಗ್ಯಲಕ್ಷ್ಮಿ ಖಾತೆಗಳು ತೆರೆದಿದ್ದಲ್ಲಿ
2. ಪೋಷಕರು ಭಾಗ್ಯಲಕ್ಷ್ಮಿ ಖಾತೆಯನ್ನು ನಿರಾಕರಿಸಿದ್ದಲ್ಲಿ
3. ಈಗಾಗಲೇ LIC ಇಂದ ಬಾಂಡ್ ಬಂದಿದ್ದು ಪುನಃ ಭಾಗ್ಯಲಕ್ಷ್ಮಿ–SSA ಖಾತೆ ಜಾರಿಗೊಂಡಿದ್ದಲ್ಲಿ.
4. ಕುಟುಂಬದಲ್ಲಿ ಎರಡಕ್ಕಿಂತ ಹೆಚ್ಚು ಮಕ್ಕಳು ಆಗಿರುವ ಕಾರಣಕ್ಕೆ ಭಾಗ್ಯಲಕ್ಷ್ಮಿ ಸೌಲಭ್ಯ ಅಮಾನ್ಯಗೊಂಡಿದ್ದಲ್ಲಿ.

ಈ ಮೇಲ್ಕಂಡ ಸಂದರ್ಭಗಳಲ್ಲಿ ಭಾಗ್ಯಲಕ್ಷ್ಮಿ–SSA ಖಾತೆಯು ಅನಿಯಮಿತ ಎಂದು ತೀರ್ಮಾನಿಸಿ ಅಂತಹ ಖಾತೆಗಳ ಮುಕ್ತಾಯಕ್ಕಾಗಿ ಸಂಬಂಧಪಟ್ಟ CDPO ಅವರು ಪತ್ರ ಬರೆದು ಭಾಗ್ಯಲಕ್ಷ್ಮಿ–SSA ಖಾತೆಯ AOF (Account Opening Form) ಮತ್ತು ಪಾಸ್‌ಪುಸ್ತಕ ಸಮೇತ ಜಂಟಿ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು ಇವರ ಮುಖಾಂತರ G.P.O Bengaluru ಗೆ ಕಳುಹಿಸಿಕೊಡುವುದು.

## **ಮೊದಲೇ ತೆರೆದಿರುವಂತಹ ವೈಯಕ್ತಿಕ SSA ಖಾತೆಯನ್ನು ಭಾಗ್ಯಲಕ್ಷ್ಮಿ ಯೋಜನೆಗೆ ಲಿಂಕ್ ಮಾಡಲು ಧೃಢೀಕರಣ ಪತ್ರ**

**ಇವರಿಂದ:**
**ಶ್ರೀಮತಿ/ಶ್ರೀ**

**(ಪೋಷಕರ ಹೆಸರು ಮತ್ತು ವಿಳಾಸ)**

**ಇವರಿಗೆ:**
**ಪ್ರಧಾನ ಅಂಚೆ ಪಾಲಕರು**
**ಜಿ.ಪಿ.ಓ. ಬೆಂಗಳೂರು**
**ಬೆಂಗಳೂರು – 560001**

**ಮಾನ್ಯರೇ,**

**ವಿಷಯ:– ಕುಮಾರಿ____________________________ ಇವರ ಹೆಸರಿನಲ್ಲಿ ತೆರೆದ ಭಾಗ್ಯಲಕ್ಷ್ಮಿ–SSA ಖಾತೆಯ ಬದಲಾಗಿ, ಇದೇ ಫಲಾನುಭವಿಯ ಹೆಸರಿನಲ್ಲಿ ತೆರೆಯಲ್ಪಟ್ಟ ವೈಯಕ್ತಿಕ–SSA ಖಾತೆಯನ್ನು ಭಾಗ್ಯಲಕ್ಷ್ಮಿ ಯೋಜನೆಗೆ ಲಿಂಕ್ ಮಾಡುವ ಕುರಿತು.**

ನಾನು ಈ ಮೂಲಕ ತಿಳಿಸುವುದೇನೆಂದರೆ, ನಮ್ಮ ಕುಟುಂಬ ಬಿಪಿಎಲ್ ಕಾರ್ಡ್ ಹೊಂದಿದ್ದು ಮಹಿಳಾ ಮತ್ತು ಮಕ್ಕಳ ಇಲಾಖೆ __________ ಜಿಲ್ಲೆ ಇವರು ನನ್ನ ಮಗಳನ್ನು ಕರ್ನಾಟಕ ಸರ್ಕಾರದ ಭಾಗ್ಯಲಕ್ಷ್ಮಿ ಯೋಜನೆಯ ಫಲಾನುಭವಿಯಾಗಿ ಗುರುತಿಸಿದ್ದು, ಈ ಯೋಜನೆಯ ಅಡಿ ಬೆಂಗಳೂರು ಜಿ.ಪಿ.ಓ ದಲ್ಲಿ ದಿನಾಂಕ __________ ರಂದು ಸುಕನ್ಯಾ ಸಮೃದ್ಧಿ ಖಾತೆಯನ್ನು ತೆರೆಯಲಾಗಿದ್ದು ಖಾತೆ ಸಂಖ್ಯೆ __________________ ಆಗಿರುತ್ತದೆ.

ಅಲ್ಲದೇ, ನಾನು ನನ್ನ ಮಗಳ ಹೆಸರಿನಲ್ಲಿ __________________ ಅಂಚೆ ಕಛೇರಿಯಲ್ಲಿ ಸುಕನ್ಯಾ ಸಮೃದ್ಧಿ ಖಾತೆಯನ್ನು ದಿನಾಂಕ _________ ರಂದು ವೈಯಕ್ತಿಕವಾಗಿ ತೆರೆದಿದ್ದು ಆ ಖಾತೆ ಸಂಖ್ಯೆ __________________ ಆಗಿರುತ್ತದೆ.

ಒಂದೇ ಹೆಣ್ಣು ಮಗುವಿನ ಹೆಸರಿನಲ್ಲಿ ಎರಡು ಸುಕನ್ಯಾ ಸಮೃದ್ಧಿ ಖಾತೆಗಳನ್ನು ಹೊಂದುವಂತಿಲ್ಲ ಎನ್ನುವ ವಿಷಯ ನನಗೆ ಮನವರಿಕೆ ಆಗಿರುತ್ತದೆ. ಈ ನಿಟ್ಟಿನಲ್ಲಿ, ನನ್ನ ಮಗಳ ಹೆಸರಿನಲ್ಲಿ ಎರಡನೆಯದಾಗಿ ತೆರೆಯಲಾದ ಭಾಗ್ಯಲಕ್ಷ್ಮಿ– SSA ಖಾತೆ ಸಂಖ್ಯೆ _______________ ಅನ್ನು ಅನಿಯಮಿತ ಎಂದು ಗುರುತಿಸಿ ಅಕಾಲಿಕವಾಗಿ, ಬಡ್ಡಿರಹಿತವಾಗಿ ಮುಚ್ಚಲು ಈ ಮೂಲಕ ವಿನಂತಿಸುತ್ತೇನೆ ಹಾಗೂ ನಾನು ಮುಂಚಿತವಾಗಿ ತೆರೆದ ವೈಯಕ್ತಿಕ–SSA ಖಾತೆ ಸಂಖ್ಯೆ ________________ ಅನ್ನು ಭಾಗ್ಯಲಕ್ಷ್ಮಿ ಯೋಜನೆಗೆ ಲಿಂಕ್ ಮಾಡಲು ನನ್ನ ಒಪ್ಪಿಗೆ ಇದ್ದು ಭಾಗ್ಯಲಕ್ಷ್ಮಿ ಯೋಜನೆಗೆ ಲಿಂಕ್ ಮಾಡಿಕೊಡಬೇಕಾಗಿ ವಿನಂತಿಸಿಕೊಳ್ಳುತ್ತೇನೆ.

ಧನ್ಯವಾದಗಳೊಂದಿಗೆ

**ಇಂತಿ ತಮ್ಮ ನಂಬಿಕಸ್ಥೆ**
ಸಹಿ __________

ಹೆಸರು __________

ಭಾಗ್ಯಲಕ್ಷ್ಮಿ ಐಡಿ _______________

ಅರ್ಜಿ ವಿವರಗಳನ್ನು ಪರಿಶೀಲಿಸಿ, ಈ ನಿವೇದನೆಯಲ್ಲಿ ನೀಡಲಾದ ವಿಷಯಗಳು ಸರಿಯಾಗಿವೆ ಎಂದು ಈ ಮೂಲಕ ಧೃಢೀಕರಿಸುತ್ತೇನೆ. ಭಾಗ್ಯಲಕ್ಷ್ಮಿ ಯೋಜನೆಯಂತೆ ಫಲಾನುಭವಿ ಕುಮಾರಿ ________________ ಹೆಸರಿನಲ್ಲಿ ತೆರೆದಿರುವ ಭಾಗ್ಯಲಕ್ಷ್ಮಿ ಖಾತೆ ಸಂಖ್ಯೆ ______________ ಅನ್ನು ಅನಿಯಮಿತ ಖಾತೆ ಎಂದು ಗುರುತಿಸಿ ಬಡ್ಡಿ ರಹಿತವಾಗಿ ಮುಕ್ತಾಯಗೊಳಿಸಲು ಹಾಗೂ ವೈಯಕ್ತಿಕವಾಗಿ ತೆರೆಯಲಾದ ಸುಕನ್ಯಾ ಸಮೃದ್ಧಿ ಖಾತೆ ಸಂಖ್ಯೆ ___________ ಅನ್ನು ಭಾಗ್ಯಲಕ್ಷ್ಮಿ ಯೋಜನೆಗೆ ಲಿಂಕ್ ಮಾಡಿ ಈ ಯೋಜನೆಯ ಅಡಿ ನೀಡಲಾಗುವ ವಾರ್ಷಿಕ ಕಂತು ಜಮಾ ಮಾಡಲು ಈ ಮೂಲಕ ಅನುಮೋದಿಸಲಾಗಿದೆ.

ದಿನಾಂಕ ____________

ಸಹಿ
ಮೊಹರು (ಮಹಿಳಾ ಮತ್ತು ಮಕ್ಕಳ ಇಲಾಖೆಯ ಅಧಿಕಾರಿ)